Regd No BG 155 28-10-1969

SATYAVADI Daily, MYSORE 4 53 rd Year of Publication

ಸುವರ್ಣ ಮಹೋತ್ಸವ ನಡೆಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಚಂಡಿಘರ್‌ಗಾಗಿ ಪ್ರಾಣಾರ್ಪಣೆ ಮಾಡಿದ ಶ್ರೀ ಫೆರಾನ್

ಅಪಾಯಕಾರಿ

ರಾಜಘಿರ್— ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯಿರುವ ಹೊಸ ರೀತಿಯ ಕಟ್ಟಳೆಗೂ, ಯುದ್ಧವನ್ನು ನಿರ್ಮೂಲಗೊಳಿಸಿ, ಅಹಿಂಸಾ ಯುಗ ಸ್ಥಾಪಿಸುವ ಬಗ್ಗೆ ವಿವಿಧ ದೇಶಗಳ ಶಾಂತಿ ಪ್ರೇಮಿಗಳು ಸಮ್ಮಿಳಿತರಾಗಿ ವಿಚಾರವಿನಿಮಯ ನಡೆಸುವರು – ಸೈನ್ಯ ಶೇಖರಣೆಗಳನ್ನು ಲೆಕ್ಕಿಸಿದರೆ, ದೊಡ್ಡ ದೇಶಗಳಾದ ಅಮೆರಿಕ, ರಷ್ಯ ಚೀನಾ ಮತ್ತು ಭಾರತಗಳು 'ಅಪಾಯಕಾರಿ" ಎಂದು ಘೋಷಿಸಲ್ಪಡುವ ಕಾಲ ಬರುವದೆಂದು ಜಯಪ್ರಕಾಶ ನಾರಾಯಣರು ಹೇಳಿದರು

★

4000 ವರ್ಷಗಳ ಹಿಂದಿನ ಭತ್ತ

ಪಾಟ್ನಾ— ಬೀಹಾರಿನಲ್ಲಿ 4000 ವರ್ಷಗಳ ಹಿಂದೆ ಭತ್ತದ ಬೆಳೆಯಲ್ಪಡುತ್ತಿದ್ದಿತೆಂಬುದು ಚಿರಾಂಡ್‌ನಲ್ಲಿ 'ಭೂಗರ್ಭ ಶೋಧನೆ'ಯಿಂದ ವ್ಯಕ್ತಪಟ್ಟಿದೆ.

ನಾಲ್ಕನೇ ಯೋಜನೆಯಲ್ಲಿ

ನವದೆಹಲಿ— ಮೈಸೂರು ರಾಜ್ಯದ ನಾಲ್ಕನೇ ಯೋಜನೆಗೆ (1969–74) ನಿಗದಿ ಮಾಡಿರುವ ರೂ 6066 ಕೋಟಿ ಸ್ವಲ್ಪ ಹೆಚ್ಚಿಸಲ್ಪಡಬಹುದೆಂದು ಸೇಳಲಾಗಿದೆ.

○

ಹಸಿರು ಕ್ರಾಂತಿ

ಹೈದರಾಬಾದು— ಹಸಿರು ಕ್ರಾಂತಿ ಸಾಮಾಜಿಕ ಮೋಸವೇಡೂ, ಸರಕಾರ, ಅಧಿಕಾರಿಗಳು, ಅರ್ಥಶಾಸ್ತ್ರಜ್ಞರೂ ಇದಕ್ಕೆ ಪಾರ್ಟಿಗಳಾಗಿರುವುದು ವಿಷಾದಕರವೆಂದು ಖ್ಯಾತ ಅರ್ಥಶಾಸ್ತ್ರಜ್ಞ ಡಾ॥ ಜ್ಞಾನ ಚಂದ್ ಹೇಳಿದರು.

ಮೈಸೂರು ಪೆವಿಲಿಯನ್

ದಸರಾಹಲಿ— ಗಾಂಧೀದರ್ಶನ ಪ್ರದರ್ಶನದಲ್ಲಿನದಲ್ಲಿನ ಮೈಸೂರು ಪೆವಿಲಿಯನ್ ತುಂಬಾ ಆಕರ್ಷಣೀಯವಾಗಿದ್ದು, ಭಾರೀ ಗುಂಪುಗಳಲ್ಲಿ ಜನರು ಬಂದು ನೋಡುತ್ತಿರುವರು.

★

ಚಂದ್ರಮಾನವರು

ಬೊಂಬಾಯಿ— ಇಲ್ಲಿಗೆ ಆಗಮಿಸಿಹ ಮೂರು ಮಂದಿ ಚಂದ್ರಮಾನವರಿಗೆ ಹಾರ್ದಿಕ ಅದ್ದೂರಿ ಸ್ವಾಗತ ದೊರೆಯಿತು.

★

ಮೂಲಭೂತ ಹಕ್ಕುಗಳು

ಹೈದರಾಬಾದ್— ರಾಜ್ಯಾಂಗದಲ್ಲಿನ ಮೂಲಭೂತ ಹಕ್ಕುಗಳ ತಿದ್ದುಪಡಿ ಮಾಡಲು ಪಾರ್ಲಿಮೆಂಟು ತನ್ನಷ್ಟಕ್ಕೆ ತಾನೇ ವಹಿಸಿಕೊಡರೆ, ಭಾರತದಲ್ಲಿ ಕಾನೂನುಬದ್ಧ ಶಾಸನದ ಅಂತ್ಯಕ್ಕೆ ನಾಂದಿ ನಡೆದಂತಾಗುವದೆಂದು ಭಾರತದ ಮಾಜಿ ಮುಖ್ಯ ನ್ಯಾಯಾಧೀಶರಾದ ಶ್ರೀ ಕೆ. ಸುಬ್ಬರಾವ್ ರವರು ಹೇಳಿದರು.

ಅನೈತಿಕ ಕಾರ್ಯ

ಬೆಂಗಳೂರು—ಶ್ರೀ ನಿಜಲಿಂಗಪ್ಪನವರ ಪರ ಸಹಿ ಸಂಗ್ರಹವನ್ನು ಎಂ.ಪಿ.ಸಿ.ಸಿ ಮಾಡುತ್ತಿರುವದೆಂಬುದನ್ನು ಅಧ್ಯಕ್ಷ ಡಾ! ನಾಗಪ್ಪ ಆಳ್ವಾರವರು ನಿರಾಕರಿಸಿ, ಸಹಿ ಸಂಗ್ರಹ ಚಳವಳವು ಅನೈತಿಕವೆಂದು ಹೇಳಿದರು.

○

ಪಾಯಂ ಶಾಂತಿ ನೆಲೆಸಲು

ರಾಜಘಿರ್— ಅಫ್ಘಾನಿಸ್ಥಾನ, ಬರ್ಮಾ ಸಿಲೋನ್ ತ್ರಿಕೋಣದ ಪಕ್ಕಗಳಾಗಿರುವವೆಂದೂ, ಈ ತ್ರಿಕೋಣದೊಳಗಿರುವ ದೇಶಗಳು ಜೊತೆಗೂಡದೆ ಪಾಯ ಶಾಂತಿ ನೆಲೆಸಲಾರದೆಂದೂ ಆಚಾರ್ಯ ವಿನೋಬಾ ಭಾವೆ ಹೇಳಿದರು

★

ಮೈಸೂರು ಲಾಟರಿ

ಬೆಂಗಳೂರು— ಸೋಮವಾರ ಸಂಜೆ ಹೊತ್ತಿಗೆ ಮೈಸೂರು ಲಾಟರಿಯ 60 ಲಕ್ಷ ಟಿಕೀಟುಗಳು ಮಾರುಕಟ್ಟೆಗೆ ಕಳುಹಿಸಲಾಗಿದೆಯೆಂದು ಹೇಳಲಾಗಿದೆ.

ಫೆರುರ್ಮಾರ ನಿಧನ

ಅಮೃತಸರ— ಚಂಡೀಘರ್‌ಗಾಗಿ ಉಪವಾಸ ಕೈಗೊಂಡಿದ್ದ 83 ವರ್ಷದ ಶ್ರೀ ದರ್ಶನಸಿಂಗ್ ಫೆರುರ್ಮಾ ಸೋಮವಾರ ಮಧ್ಯಾಹ್ನ 74 ನೇ ಉಪವಾಸದ ದಿನದಂದು ನಿಧನರಾದರು – ಇವರಿಗೆ ರಾಜ್ಯ ಮಟ್ಟದ ಶವಸಂಸ್ಕಾರ ನಡೆಯುವುದು.

★

ರೂ 80 ಲಕ್ಷ ಬಾಣಬಿರುಸು

ಮದರಾಸು— ಗುಜರಾತಿನಲ್ಲಿ ಆದ ಈಚಿನ ಗಲಭೆಗಾಗಿ ಈ ತಿಂಗಳ ಪ್ರಾರಂಭದಿಂದ ಅಲ್ಲಿಯ ಸರಕಾರವು ಬಾಣಬಿರುಸುಗಳನ್ನು ಪ್ರತಿಬಂಧಿಸಿ, ಶಿವಕಾಶಿಯಿಂದ ಅಲ್ಲಿಗೆ ಕಳುಹಿಸಲಾಗಿದ್ದ ರೂ 80 ಲಕ್ಷದಷ್ಟು ಬಾಣಬಿರುಸುಗಳಿದ್ದ ಗೋಟ್ಸ್‌ಗಳಿಗೆ ಬೀಗಮುದ್ರೆ ಮಾಡಲಾಗಿದೆ – ಇವು ದೀಪಾವಳಿಗೆ ಮಾರಾಟಕ್ಕಾಗಿದ್ದು ಸಕಾಲದಲ್ಲಿ ಬಿಡುಗಡೆಯಾಗದಿದ್ದಕ್ಕೆ ಕಳುಹಿಸಿರುವವರಿಗೆ ತುಂಬಾ ನಷ್ಟವಾಗುವದೆಂದು ಅಲ್ಲಿಯ ಮುಖ್ಯಮಂತ್ರಿಗಳಿಗೆ ತಿಳಿಸಲಾಗಿದೆ.

★

ಪಾಕಿಸ್ಥಾನದಲ್ಲಿ ಪತ್ರಿಕೆಗಳ ಸ್ಥಿತಿ

ನವದೆಹಲಿ— ಅಧ್ಯಕ್ಷ ಅಯೂಬರ 10-ವರ್ಷದ ಆಡಳಿತದಲ್ಲಿ ಪಾಕಿಸ್ಥಾನದ 21 ಪತ್ರಿಕೆಗಳು ನಿಂತುಹೋದವೆಂದೂ, ಈ ಪೈಕಿ 93 ವರ್ಷದ ಇಂಗ್ಲೀಷಿನ ಸಿವಿಲ್ ಮತ್ತು ಮಿಲಿಟರಿ ಗೆಜಿಟ್ ಒಂದೆಂದೂ ಪ್ರಕಟವಾಗಿದೆ.

●

ರಾಜಗಿರ್ (ಬಿಹಾರ್)— ಜಪಾನ್ ಬುದ್ಧ ಸಂಘದ ಸಹಾಯದಿಂದ 11000 ಅಡಿ ಎತ್ತರದ ರತ್ನಗಿರಿ ಬೆಟ್ಟಗಳ ಮೇಲೆ ನಿರ್ಮಿಸಲಾಗಿರುವ 150 ಎತ್ತರದ ಬುದ್ಧ ಸ್ತೂಪವನ್ನು ರಾಷ್ಟ್ರಾಧ್ಯಕ್ಷ ಶ್ರೀ ಗಿರಿಯವರು ಉದ್ಘಾಟಿಸಿದರು.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯ ಲಾಟರಿ

2,50,000 ರೂ. ಗಳ 4 ಮೊದಲನೆ ಬಹುಮಾನಗಳು

1,00,000 ರೂ. ಗಳ 4 ಎರಡನೆ ಬಹುಮಾನಗಳು

ಇವುಗಳಲ್ಲದೆ ಜೊತೆಗೆ 4,268 ಇತರ 100 ರೂ. ಇಂದ 50,000 ರೂ. ವರೆಗಿನ ನಗದು ಬಹುಮಾನಗಳು

ಒಂದು ಟಿಕೆಟ್ಟಿನ ಬೆಲೆ 1-00 ರೂ. ಮಾತ್ರ

ಲಾಟರಿ "ಡ್ರಾ" ಮಾಡುವ ತಾರೀಖು, 25 ನೇ ಜನವರಿ 1970, ಭಾನುವಾರ

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು

ಏ ಐ ಸಿ ಸಿ ವಿಶೇಷ ಅಧಿವೇಶನ ಕರೆಯಲು ಪ್ರಧಾನಿಯವರ ಬೆಂಬಲಿಗರ ಪ್ರಾಬಲ್ಯವು ಅಶಿಸ್ತಿನ ಕಾರ್ಯ ಎಂದು ಶ್ರೀ ಮುರಾರ್ಜಿ ದೇಸಾಯರು ಪಾಟ್ನಾದಲ್ಲಿ ಟೀಸಿದರು.

ವುಡ್‌ಲ್ಯಾಂಡ್ ಜಯಪ್ರದ ಶೈಲೇ ನಾಗ್

ಆನೋಖೆ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹಸೀನಾ ಮಾನ್ ಜಾಯೇಗಿ

ಶಶಿಕಪೂರ್ ಬಬಿತಾ ಜಾನಿವಾಕರ್

ಸಂಗೀತ : ಕಲ್ಯಾಣಜಿ ಆನಂದಜಿ

[ದಿನ 3 ಪ್ರದರ್ಶನಗಳು]

ಆಪೇರಾ — ತಾ. 24–10–69 ರಿಂದ

.... ಅತ್ಯಮೋಘ ತಮಿಳು ಚಿತ್ರ ....

ತುಣ್ಡೈವನ್

ಪಾತ್ರ— ಎ ವಿ ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್

ನಿರ್ದೇಶನ : ಎಂ ಎಂ ತಿರುಮಂಗಂ

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪಾಲನೆಯಲ್ಲಿ ಕಾರ್ಯಗಳಲ್ಲಿ ಹೆಜ್ಜೆಹಾಕಿ ಸಹಾಯ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Saivavadi Press Chamarajapura, Mysore 4

ಮೈಸೂರು ಲೋಕೋಪಯೋಗಿ ಇಲಾಖೆ

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ನಂ. 21)

ಮೈಸೂರು ಲೋಕೋಪಯೋಗಿ ಇಲಾಖೆಯಲ್ಲಿ ರಿಜಿಸ್ಟರಾಗಿ ಅಂಗೀಕೃತವಾಗಿರುವ ಕಂಟ್ರಾಕ್ಟರುಗಳಿಂದ ಈ ಕೆಳಗೆ ಕಂಡ ಕೆಲಸಗಳಿಗಾಗಿ, ಕೆಲಸದ ಹೆಸರು ನಮೂದಿಸಿರುವ ಸೀಲುವಾದ ಕೊಟೇಷನ್‌ಗಳನ್ನು ವಿಧಾಯುಕ್ತವಾದ ಫಾರಂನಲ್ಲಿ ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದೆ ಮತ್ತು ಮೈಸೂರು 1 ರಲ್ಲಿರುವ, ಕಟ್ಟಡಗಳ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಂದ ಅವರ ಕಚೇರಿಯಲ್ಲಿ 1969 ರ ನವೆಂಬರ್ 14 ನೇ ತಾರೀಖು ಮಧ್ಯಾಹ್ನ 4 ಗಂಟೆವರೆಗೆ ಸ್ವೀಕರಿಸಲ್ಪಡುವುದು. ಸಾಧ್ಯವಾದರೆ, ಬಂದ ಟೆಂಡರುಗಳನ್ನು ಅದೇ ದಿನವೆ ಒಡೆಯಲಾಗುವುದು. ಮೈಸೂರು 1 ರಲ್ಲಿರುವ ಕಟ್ಟಡಗಳ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು, 1969 ನೇ ನವೆಂಬರ್ 11 ರಿಂದ 13 ರವರೆಗೆ (ಎರಡು ದಿನಗಳೂ ಸೇರಿ) ಕೆಲಸದ ಎಲ್ಲಾ ದಿನಗಳಲ್ಲಿ ಕಛೇರಿ ವೇಳೆಗಳಲ್ಲಿ ಫಾರಂ 1 ಕ್ಕೆ ರೂ. 5 ರಂತೆ ಪಾವತಿ ಮಾಡಿದಲ್ಲಿ ಖಾಲಿ ಟೆಂಡರ್ ಫಾರಂಗಳನ್ನು ಕೊಡ್ತುವರು. ಮೈಸೂರು 1 ರಲ್ಲಿರುವ, ಕಟ್ಟಡಗಳ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಂದ ಕೆಲಸಗಳ ಮತ್ತು ಟೆಂಡರ್ ಷರತ್ತುಗಳ ಹೆಚ್ಚು ವಿವರಗಳನ್ನು ಪಡೆಯಬಹುದು.

ಟೆಂಡರುಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಕಾದಿಡಿಲ್ಪಟ್ಟಿದೆ.

ಸೀ. ನಂ.	ಕೆಲಸದ ಹೆಸರು	ಟೆಂಡರಿಗೆ ಇಟ್ಟಿರುವ ಅಂದಾಜು ಹಣ	ಇ.ಎಂ.ಡಿ	ಕೆಲಸಗಳನ್ನು ಮುಗಿಸಲು ಕಾಲಾವಧಿ	ಕಂಟ್ರಾಕ್ಟರ್ ವರ್ಗ
1.	ಮೈಸೂರಿನಲ್ಲಿರುವ ಸರ್ಕಾರಿ ಗಂಧದಮರದ ಎಣ್ಣೆ ಕಾರ್ಖಾನೆಯಲ್ಲಿ ಹೆಚ್ಚಿಗೆ ಗಂಧದಮರದ ಸಂಗ್ರಹಾಲಯ ನಿರ್ಮಿಸುವುದು	53350	1335	8 ತಿಂಗಳು	3 ಮತ್ತು ಮೇಲ್ಪಟ್ಟ
2.	ಮೈಸೂರಿನಲ್ಲಿರುವ ಹಾಲು ಸರಬರಾಜು ಯೋಜನೆಗೆ ತಪಸೀಲು ಪ್ರಕಾರ 6" x 6" ಅಳತೆ ಫ್ಲೋರಿಂಗ್‌ನ ಆಸಿಡ್ ಮತ್ತು ಆಲ್ಕಲಿ ಪ್ರೂಫ್ ಟೈಲ್ಸ್‌ಗಳನ್ನು ಸರಬರಾಜು ಮಾಡುವುದು	7200	180	2 ತಿಂಗಳು	ಪರಿಣಿತ ಪಂಗೀಕೃತ ಸಂಸ್ಥೆಗಳಿಂದ ಮಾತ್ರ
3.	ಮೈಸೂರಿನಲ್ಲಿ ಹಾಲು ಸರಬರಾಜು ಯೋಜನೆಗೆ ತಪಸೀಲು ಪ್ರಕಾರ 1" ಕ್ಲಾಸ್ ಸೆಕ್ಷನ್‌ನ 1' x 11 ತಾಂಡವಾಳ ಪೆರೇಟಿಡ್ ಟೈಲ್ಸ್‌ಗಳನ್ನು ಸರಬರಾಜು ಮಾಡುವುದು	28000	700	ಡಿಟೋ	ಡಿಟೋ
4.	ಮೈಸೂರು ಲಾ ಕೋರ್ಟು ಕಟ್ಟಡಗಳಲ್ಲಿರುವ ಮೊದಲನೆ ಮುನ್ಸೀಫರ ಕೋರ್ಟು ಮತ್ತು ಸೆಂಟ್ರಲ್ ರೆಕಾರ್ಡ್ ರೂಂನಲ್ಲಿ ಆಂಟಿ–ಟರ್ಮೈಟ್ ಟ್ರೀಟ್‌ಮೆಂಟ್ ಒದಗಿಸುವುದು	3950	100	ಡಿಟೋ	ಡಿಟೋ
5.	ಮೈಸೂರು ಕರ್ಜನ್ ಪಾರ್ಕ್‌ನಲ್ಲಿ ಬಹಿರಂಗ ರಂಗಮಂಟಪ ನಿರ್ಮಾಣಮಾಡುವುದು	13200	300	4 ತಿಂಗಳು	4 ಮತ್ತು ಮೇಲ್ಪಟ್ಟ
6.	ಮೈಸೂರಿನಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದು	3000	75	2 ತಿಂಗಳು	5 ಮತ್ತು ಮೇಲ್ಪಟ್ಟ

ಸಹಿ / – ವೈ. ಶಿವಪ್ಪ
ಎಕ್ಸಿಕ್ಯುಟಿವ್ ಇಂಜಿನಿಯರ್, ಕಟ್ಟಡಗಳ ವಿಭಾಗ